ರೋಮ್ಯಾಂಟಿಕ್ ಪದಗಳು ಬರತೊಡಗಿದವೊ ಅವಾಗಲೇ ಅನ್ಕೊಂಡೆ ನೀವು ನನ್ನ ಆಕರ್ಷಣೆಗೆ ಒಳಗಾಗಿದ್ದೀರಿ ಅಂತ. ಒಮ್ಮೆ ಏನಾದ್ರೂ ನಾನು ನಿಮ್ಮ ಸೆಳೆತಕ್ಕೆ ಸಿಲುಕಿದ್ರೆ ಬಿಡಿಸಿಕೊಳ್ಳೋದು ಕಷ್ಟ ಅಂತ ಯೋಚಿಸಿದೆ. ಅದಕ್ಕಾಗಿಯೇ ಸಾಧ್ಯವಾದಷ್ಟು ಅಂತರ ಕಾಯ್ದುಕೊಳ್ಳೋದಕ್ಕೆ ಪ್ರಯತ್ನ ಮಾಡಿದೆ. ಕಡೆಗೆ ನಿಮ್ಮ ಭಾವನೆಗಳ ತಾಕಲಾಟ, ಹಂಬಲ ನೋಡಿ ಸುಮ್ಮನಿರಕಾಗಲಿಲ್ಲ. ಅಯ್ಯೋ ಅನಿಸ್ತು. ಅದಕೆ ಇವತ್ತು ನಿಮ್ಮತ್ರ ಬರಬೇಕಾಯಿತು.'

'ದಯವಿಟ್ಟು ಕ್ಷಮಿಸಿ, ನಾನು ಹೀಗೆ ಕೇಳ್ತಿನಿ ಅಂತ ಕೋಪಿಸಕೊಬೇಡಿ. ಈ ಮಾತು ಕೇಳೋದಕ್ಕೂ ನಾನು ಯೋಗ್ಯನೋ ಇಲ್ವೋ ಗೊತ್ತಿಲ್ಲ. ಆದ್ರೂ ಕೇಳ್ತಿನಿ. ನಿಮ್ಮ ಬಗ್ಗೆ ನನಗೆ ತುಂಬಾ ಗೌರವ ಇದೆ. ಅದಕ್ಕಾಗೇ ನಿಮ್ಮನ್ನ ಫ್ರೆಂಡ್ ಮಾಡ್ಕೊಂಡೆ. ಆಮೇಲೆ, ಕ್ರಮೇಣ ನಿಮ್ಮ ಮಾನಸಿಕ, ದೈಹಿಕ ಸೌಂದರ್ಯ, ಬೌದ್ಧಿಕ ಪ್ರಬುದ್ಧತೆ ಗಮನಿಸಿ ಆಕರ್ಷಣೆಗೆ ಸಿಲುಕಿದೆ. ನಿಜವಾಗ್ಲೂ ಹೇಳ್ತಿದ್ದೀನಿ. ಈಗ ನನಗೆ ನಿಮ್ಮ ಸ್ನೇಹ ಎಷ್ಟು ಮುಖ್ಯನೊ ನಿಮ್ಮನ್ನ ಒಲಿಸಿಕೊಳ್ಳೊದೂ ಅಷ್ಟೇ ಅಗತ್ಯ ಅನಿಸ್ತಿದೆ. ಆದ್ರೆ ನನ್ನ ಈ ಆಕಾಂಕ್ಷೆಯ ನಿವೇದನೆಯನ್ನ ನೀವು ಸ್ವೀಕಾರ ಮಾಡಲೇ ಬೇಕು ಅಂತ ಏನಿಲ್ಲ. ನಿಮಗೆ ಹೇಳಿಬಿಡಬೇಕು ಅನಿಸ್ತು ಅದಕ್ಕೇ ಹೇಳಿದೆ. ಅಷ್ಟಕ್ಕೂ ಈ ವಿಷಯದಲ್ಲಿ ನನ್ನನ್ನ ನೀವು ಯಾಕೆ ತಿರಸ್ಕಾರ ಮಾಡ್ತಿರಿ ಅಂತ ಬಿಡಿಸಿ ಹೇಳ್ತಿರಾ?'

'ನಿಮ್ಮ ಮಾತು ಹೇಗಿದೆಯಂದ್ರೆ, ಮೀನಿನ ಮಾರ್ಕೆಟಿಗೆ ಬಂದ ಗಿರಾಕಿಯೊಬ್ಬ ಮಾರುವವನಿಗೆ ಕೇಳಿದ್ನಂತೆ. ನಿನ್ನತ್ರ ಇರೋ ಮೀನು ಚೆನ್ನಾಗಿದೆ. ನನಗದು ಭಾಳ ಇಷ್ಟಾ ಆಗಿದೆ. ನೀನ್ಯಾಕೆ ಅದನ್ನ ನನಗೆ ಹಾಗೇ ಕೊಡಲ್ಲ ಅಂತ ಬಿಡಿಸಿ ಹೇಳ್ತಿಯಾ ಅಂತ ಕೇಳಿದ್ನನಂತೆ. ಅದಕ್ಕೆ ಮಾರವ್ನು ಏನ್ ಹೇಳಬೇಕು. ನೀನು ಅದನ್ನ ತಿನ್ನೋದಕ್ಕೆ ಯೋಗ್ಯನಲ್ಲ ಅಂತಾ ಹೇಳಬೇಕೊ ಅಥವಾ ಅದನ್ನ ನಿನಗೆ ಮಾರೋದಕ್ಕೆ ಇಷ್ಟಾ ಇಲ್ಲಾ ಅಂತ ಹೇಳಬೇಕೊ? ಮೀನು ಚೆನ್ನಾಗಿದೆ ಅನಿಸಿದ ಮಾತ್ರಕ್ಕೆ ಅದು ಫ್ರೀಯಾಗಿ ಸಿಗಬೇಕು ಅಂತ ಯೋಚನೆ ಮಾಡಬಾರದು. ಅದಕ್ಕೂ ಅದರದೇ ಆದ ಮೌಲ್ಯ ಅಂತ ಇರತದಲ್ವಾ? ಅದೂ ಅಲ್ದೆ ಮೀನು ಮಾರುವವನ ವೃತ್ತಿ ಧರ್ಮ ಅಂತನೂ ಇರತದೆ ಅಲ್ವಾ?' ಎಂದು ಹೇಳಿದಳು. ಅದನ್ನು ಕೇಳಿಸಿಕೊಂಡ ಅವನು ಗೊಂದಲಕ್ಕೊಳಗಾಗಿ—

'ನೀವು ಹೇಳಿದ ಸಿದ್ಧಾಂತ, ತರ್ಕ ನನಗೆ ಸರಿಯಾಗಿ ಅರ್ಥ ಆಗಲಿಲ್ಲ. ಅಷ್ಟಕ್ಕೂ ನೀವು ಮತ್ತೆ ನಿಮ್ಮ ಸಂಬಂಧ ಅನ್ನೋದು ಮಾರಾಟಕ್ಕಿಟ್ಟಿರೋ ವಸ್ತುವಲ್ಲ ತಾನೆ? ಅದನ್ನ ಸರಿಯಾಗಿ ಸರಳೀಕರಿಸಿ ಹೇಳಿದ್ರೆ ನನಗೆ ಅರ್ಥ ಆಗ್ತದೆ.'

'ನನ್ನ ಸಾಂಗತ್ಯ, ಪ್ರೀತಿ ಮಾರಾಟದ ವಸ್ತುವಲ್ಲ ನಿಜ. ಆದ್ರೆ ನಾನು ಹೇಳ್ತಿರೋದು ಈ ಜಗತ್ನಲ್ಲಿ ಪ್ರತಿಯೊಂದಕ್ಕೇ ಅದರದೇ ಆದ ಮೌಲ್ಯ ಇರತದೆ. ನಾವು ಅದನ್ನ ಪಡೀಬೇಕಾದ್ರೆ ಅದರ ಮೌಲ್ಯವನ್ನ ಅರ್ಥ ಮಾಡಿಕೊಬೇಕು ಅಂತ.'

'ಹಾಗಾದ್ರೆ ನೀವು ಹೇಳೊದು ಸಂಬಂಧಗಳನ್ನ ಅದಕ್ಕಿರೊ ಮೌಲ್ಯ ಕೊಟ್ಟು ಖರೀದಿಸಬೇಕು ಅಂತನಾ?'

'ವಸ್ತುಗಳನ್ನಾದ್ರೆ ಖರೀದಿಸಬಹುದು. ಸಂಬಂಧಗಳನ್ನ ಖರೀದಿಸೋದಕ್ಕಾಗಲ್ಲ. ಕೊಟ್ಟು ಪಡಕೊಬೇಕು.'

ಈ ಮಾತು ಕೇಳಿ, ಮೇದಿನಿ ಏನನ್ನೋ ಹೇಳಲು ಯತ್ನಿಸಿ ಪರೋಕ್ಷವಾಗಿ ಇನ್ನೇನನ್ನೋ ಹೇಳುತ್ತಿದ್ದಾಳೆ ಅನಿಸಿತು ಅವನಿಗೆ. ಆ ವರೆಗೆ ಒಂದು ರೀತಿಯಾಗಿದ್ದ ಮೇದಿನಿಯ ಇನ್ನೊಂದು ಮುಖ ಗೋಚರಿಸಿದಂತಾಗಿ ಅವನು ಇನ್ನೂ ಗೊಂದಲಕ್ಕೊಳಗಾದ.

'ಮೇದಿನಿ, ಇವತ್ತು ನೀವ್ಯಾಕೊ ಕಾವ್ಯಾತ್ಮಕವಾಗಿ ಮಾತಾಡ್ತಿದ್ದೀರಿ. ನನಗಂತೂ ಇದು ಒಂದೂ ಅರ್ಥ ಆಗ್ತಿಲ್ಲ. ಈಗ ನಾನು ನೇರವಾಗಿ ನಿಮ್ಮನ್ನ ಕೇಳಿಕೊಳ್ಳೋದು ಇಷ್ಟೆ. ನನ್ನ ಜೀವಾ ನಿಮ್ಮನ್ನ